ಅಗತ್ಯ ಮೂಲಭೂತ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಕಾಮಗಾರಿಗಳನ್ನು ನಿರ್ಮಿಸಲು ಅಗತ್ಯವಾದ ಜಮೀನು/ನಿವೇಶನಗಳನ್ನು ಇಲಾಖೆಗೆ ಒದಗಿಸಲು ಜಿಲ್ಲಾ ಆಡಳಿತಕ್ಕೆ ಪತ್ರ ಬರೆದು ನಿವೇಶನ ದೊರೆತ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಪ್ರಶ್ನೆ ಸಂಖ್ಯೆ : 72 (181) ಶ್ರೀ ರಾಮಲಿಂಗರೆಡ್ಡಿ (ಜಯನಗರ)

ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ, ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ. ರಾಜ್ಯದಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ಹೆಲ್ಮೆಟ್ ಕಡ್ಡಾಯಗೊಳಿಸಿರುವುದನ್ನು ದ್ವಿಚಕ್ರ ವಾಹನ ಚಾಲಕರು ವಿರೋಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬೆಂಗಳೂರು ನಗರದಲ್ಲಿ ವಾಹನಗಳ ದಟ್ಟಣೆಯಿಂದ ದ್ವಿಚಕ್ರ ವಾಹನಗಳು ನಿಧಾನವಾಗಿ ಸಂಚರಿಸುತ್ತಿರಜುವುದರಿಂದ, ಹೆಲ್ಮೆಟ್ ಕಡ್ಡಾಯ ಗೊಳಿಸಿರುವುದನ್ನು ರದ್ದುಗೊಳಿಸಲು ಸರ್ಕಾರ ಆಲೋಚಿಸಿದೆಯೇ;

ಇ. ತಮಿಳುನಾಡಿನಲ್ಲಿ ಹೆಲ್ಮೆಟ್ ಕಡ್ಡಾಯಗೊಳಿಸಿ, ಸಾರ್ವಜನಿಕ ಒತ್ತಾಯದ ಮೇರೆಗೆ ರದ್ದು ಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹೆಲ್ಮೆಟ್ ಕಡ್ಡಾಯದಿಂದ ದ್ವಿಚಕ್ರ ವಾಹನ ಚಾಲಕರಿಗೆ ಆಗುತ್ತಿರುವ ತೊಂದರೆ, ಕಿರುಕುಳವನ್ನು ತಪ್ಪಿಸಲು ಸರ್ಕಾರ ದ್ವಿಚಕ್ರ ವಾಹನ ಚಾಲಕರ ಮನವಿಗೆ ಸ್ಪಂದಿಸುತ್ತದೆಯೇ?

ಶ್ರೀ ಎಂ.ಪಿ.ಪ್ರಕಾಶ್

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ

ಈ) ಇಂತಹ ಯಾವುದೇ ಮನವಿ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಪ್ರಶ್ನೆ ಸಂಖ್ಯೆ : 76 (72) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ)

ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ. ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ಸಮೀಪದ ಚಾಮಲಪುರದಲ್ಲಿ ಕಲ್ಲಿದ್ದಲು ವಿದ್ಯುತ್ ಸ್ಥಾವರ ಸ್ಥಾಪಿಸಲು ಉದ್ದೇಶಿಸಲಾಗಿದೆಯೇ;

ಆ. ಹಾಗಿದ್ದಲ್ಲಿ, ಉದ್ದೇಶಿತ ಸ್ಥಾವರ ಸ್ಥಾಪನೆಯಿಂದ ಜೀವರಾಶಿ ನಾಶವುಂಟಾಗುವುದೆಂದು ನಾಗರೀಕರ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಉಂಟಾಗುವುದೆಂದು ತಿಳಿಸಿ, ಮೈಸೂರು ಜಿಲ್ಲೆಯಾದ್ಯಂತ ಸ್ಥಾವರ ವಿರೋಧಿ ಚಳುವಳಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಜೀವರಾಶಿ ನಾಶ ಹಾಗೂ ನಾಗರೀಕರ ಅನಾರೋಗ್ಯಕ್ಕೆ ಕಾರಣವಾಗುವ ಉದ್ದೇಶಿತ ಸ್ಥಾವರದ ಸ್ಥಾಪನೆ ನಿಲ್ಲಿಸುವ ಬಗ್ಗೆ ಸರ್ಕಾರದ ನಿಲುವೇನು; ನಾಗರೀಕರಿಗೆ ಕೆಡುಕುಂಟು ಮಾಡುವ ಈ ಸ್ಥಾವರದ ಅವಶ್ಯಕತೆ ಇದೆಯೇ;

ಶ್ರೀ ಹೆಚ್.ಡಿ.ರೇವಣ್ಣ

ಅ) ಹೌದು.

ಆ) ಹೌದು.

ಇ) ರಾಜ್ಯದಲ್ಲಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಸರಿದೂಗಿಸುವ